

## ಚಪ್ಪರಕಲ್ಲು ಹಿನ್ನೆಲೆ!

ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಕಚೇರಿ ಅಂದಾಕ್ಷಣ ಆ ಭಾಗದವರಿಗೆ ಮೊದಲಿಗೆ ನೆನಪಾಗುವುದು ಚಪ್ಪರಕಲ್ಲು. ಕಾರಣ ಜಿಲ್ಲಾಧಿಕಾರಿ ಕಚೇರಿ ಇರುವುದು ಇದೇ ಚಪ್ಪರಕಲ್ಲು ಬಳಿ. ಇದಕ್ಕೆ ಚಪ್ಪರಕಲ್ಲು ಬೀರಸಂದ್ರ ಅಂತಲೂ ಹೆಸರಿದೆ. ದೇವನಹಳ್ಳಿ–ದೊಡ್ಡಬಳ್ಳಾಪುರ ಮುಖ್ಯರಸ್ತೆಯಲ್ಲಿದೆ. ಅಷ್ಟಕ್ಕೂ ಈ ಜಾಗಕ್ಕೆ ಚಪ್ಪರಕಲ್ಲು ಅನ್ನುವ ಹೆಸರೇಕೆ ಬಂತು ಅನ್ನುವ ಪ್ರಶ್ನೆ ಕಾಡುತ್ತದೆ.

ಅಲ್ಲಿನವರನ್ನು ಈ ಜಾಗಕ್ಕೆ ಚಪ್ಪರಕಲ್ಲು ಅಂತ ಯಾವ ಕಾರಣಕ್ಕೆ ಬಂತು ಎಂದು ಪ್ರಶ್ನಿಸಿದೆ. ಅಲ್ಲೇ, ನೀಲಗಿರಿ ತೋಪಿನ ಮರೆಯಲ್ಲಿ ಇದ್ದ ಬೃಹತ್ ಬಂಡೆಯ ಮೇಲಿನ ಕಲ್ಲಿನ ಚಪ್ಪರದತ್ತ ಕೈತೋರಿದ ಸ್ಥಳೀಯರೊಬ್ಬರು, 'ಈ ಜಾಗಕ್ಕೆ ಚಪ್ಪರಕಲ್ಲು ಬರಲು ಆ ಬಂಡೆಯ ಮೇಲಿರುವ ಕಲ್ಲಿನ ಮಂಟಪವೇ ಕಾರಣ' ಎಂದರು. ಹಾಗೇ ಮುಂದುವರೆದ ಅವರು, 'ಸುಮಾರು 250 ವರ್ಷಗಳ ಹಿಂದೆ ಮಂಗಳೂರಿನ ರಾಣಿಯೊಬ್ಬರು ನಂದಿಬೆಟ್ಟಕ್ಕೆ ಹೋಗುತ್ತಿದ್ದಾಗ ಆಕರ್ಷಕವಾಗಿ ಕಂಡ ಈ ಬಂಡೆಯ ಬಳಿ ವಿಶ್ರಾಂತಿಗೆಂದು ಕೆಲ ಹೊತ್ತು ತಂಗಿದ್ದರು. ಅವರಿಗೆ ಆ ಬಂಡೆ ಮತ್ತು ಅದರ ಸುತ್ತಮುತ್ತಲಿನ ವಾತಾವರಣ ಇಷ್ಟವಾಗಿ, 'ಮುಂದಿನ ಬಾರಿ ನಾನು ನಂದಿಬೆಟ್ಟಕ್ಕೆ ಬರುವಾಗ ಇಲ್ಲಿ ವಿಶ್ರಾಂತಿ ಪಡೆಯಲು ಬಂಡೆಯ ಮೇಲೆ ಕಲ್ಲಿನ ಚಪ್ಪರ ನಿರ್ಮಿಸಿ' ಎಂದು ಸ್ಥಳೀಯ ಪಾಳೇಗಾರರೊಬ್ಬರಿಗೆ ಹೇಳಿದ್ದರು. ಅಂತೆಯೇ ಅವರು ಕಲ್ಲಿನ ಚಪ್ಪರ ನಿರ್ಮಿಸಲು ಮುಂದಾಗಿದ್ದ. ಈ ನಡುವೆ ಆ ರಾಣಿಯ ಅಕಾಲಿಕ ಮರಣದ ಸುದ್ದಿ ತಿಳಿದು ಕಲ್ಲಿನ ಚಪ್ಪರ ನಿರ್ಮಾಣದ ಕಾರ್ಯ ಅರ್ಧಕ್ಕೆ ನಿಲ್ಲಿಸಿದರಂತೆ. ಈ ಕಾರಣಕ್ಕೆ ಚಪ್ಪರಕಲ್ಲು ಎಂಬ ಹೆಸರು ಬಂತು' ಎಂದರು.

ಇದೇ ಚಪ್ಪರಕಲ್ಲು ಬಳಿ 'ಎಡಕಲ್ಲು ಗುಡ್ಡದ ಮೇಲೆ' ಸಿನಿಮಾದ ಚಿತ್ರೀಕರಣವೂ ನಡೆದಿತ್ತಂತೆ. ಸುಮಾರು 140 ಅಡಿ ಅಗಲ, 35 ಅಡಿ ಎತ್ತರದ ಬಂಡೆಯ ಮೇಲೆ 5.3 ಅಡಿ ಎತ್ತರದ ಹತ್ತು ಕಲ್ಲಿನ ಕಂಬಗಳಿಂದ ಅಪೂರ್ಣ ಮಂಟಪ ನಿಂತಿದೆ.

—ಮನೋಜ್ ಆರ್. ಕೋಲಾರ

## ಬಯಲುಸೀಮೆಯಲ್ಲಿ ಕಂಡ ದೊಡ್ಡ ಸೀಗಡಿ!



ಕೆ.ಸಿ. ವ್ಯಾಲಿಯಂತಹ ಜನಪರ ಯೋಜನೆಯ ಫಲವಾಗಿ ಚಿಕ್ಕಬಳ್ಳಾಪುರ ಮತ್ತು ಕೋಲಾರದಂತಹ ಬಯಲುಸೀಮೆಯು ಕಳೆದ ಐದಾರು ವರ್ಷಗಳಿಂದ ಜೀವಕಳೆ ಪಡೆದುಕೊಂಡಿದೆ. ಅಂತರ್ಜಲ ಮಟ್ಟವು ಹೆಚ್ಚುತ್ತಿದ್ದು, ಕೃಷಿಯನ್ನು ತೊರೆದಿದ್ದ ಅನೇಕ ರೈತರು ಮತ್ತೆ ತಮ್ಮ ಮೂಲ ಕಸುಬಿನತ್ತ ಮುಖಮಾಡಿದ್ದಾರೆ. ವರ್ಷಪೂರ್ತಿ ಕೆರೆಗಳು ತುಂಬಿರುವುದು ಕಣ್ಣುಂಬಿಕೊಳ್ಳುವುದೇ ಚೆಂದ.

ಕೆ.ಸಿ. ವ್ಯಾಲಿ ಯೋಜನೆಯ ಪ್ರಭಾವವೇನೋ ಎಂಬಂತೆ ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ಯಡಗಾರು ಗ್ರಾಮ ಸಮೀಪದ ಕೆರೆಯು ಕೋಡಿ ನೀರು ನಿರಂತರವಾಗಿ ಹರಿಯುತ್ತದೆ. ಅದರಲ್ಲಿ ಮೀನುಗಳು, ಸೀಗಡಿ ಮೀನುಗಳು ಸಾಕಷ್ಟಿವೆ. ಸುತ್ತಮುತ್ತಲಿನ ಜನರು ಮೀನುಗಳಿಗಾಗಿ ಇಲ್ಲಿಗೆ ಬರುತ್ತಾರೆ. ಇನ್ನೂ ಕೆಲವರು ವ್ಯಾಪಾರದ ಉದ್ದೇಶಕ್ಕಾಗಿಯೇ ಈ ಕೆರೆಯಲ್ಲಿ ಮೀನು, ಸೀಗಡಿ ಸಾಕಾಣೆ ಮಾಡುತ್ತಿದ್ದು, ದೂರದ ಕೋಲ್ಕತ್ತದಿಂದಲೂ ಇಲ್ಲಿಗೆ ಬಂದು ವಿಶೇಷ ಸೀಗಡಿಗೆ ಬಲೆಬೀಸುತ್ತಾರೆ. ಹೀಗೆ ಒಮ್ಮೆ ಬಲೆ ಬೀಸಿದಾಗ ಸಿಕ್ಕ ದೊಡ್ಡ ಗಾತ್ರದ ಸೀಗಡಿಯ ಚಿತ್ರವೇ ಇದು. ಭಯದಿಂದಲೇ ಅದರ ಉದ್ದನೆಯ ಕಾಲುಗಳನ್ನು ಕೈಯಲ್ಲಿ ಹಿಡಿದೆ.

—ಪವನ್ ಕುಮಾರ್, ಚಿಕ್ಕಬಳ್ಳಾಪುರ

## ಧೂಪದ ಭಕ್ತಿ, ಬದುಕು!



ಸಾಮಾನ್ಯವಾಗಿ ದೇವರಿಗೆ ಧೂಪ ಹಾಕುವುದು ಗರ್ಭ ಗುಡಿಯಲ್ಲಿ. ಅದು ಬಿಟ್ಟರೆ ದೇಗುಲದ ಒಳ ಆವರಣದಲ್ಲಿ. ಆದರೆ ನಂಜನಗೂಡಿನ ಶ್ರೀಕಂಠೇಶ್ವರ ದೇಗುಲದ ಮುಖ್ಯ ದ್ವಾರದ ಆಚೆ ಇಚೆ ಭಕ್ತರು ಶ್ರೀಂಕಠೇಶ್ವರನಿಗೆ ಸಾಂಬ್ರಾಣಿ ಧೂಪ ಹಾಕಿ ಭಕ್ತಿ ಸಮರ್ಪಿಸುತ್ತಾರೆ! ಸ್ಥಳೀಯ ಕೆಲ ಮಹಿಳೆಯರು ಇದಕ್ಕೆ ಬೇಕಾಗುವ ವ್ಯವಸ್ಥೆ ಮಾಡಿ, ಅದಕ್ಕೆ ಭಕ್ತರಿಂದ ತಲಾ ಹತ್ತು ರೂಪಾಯಿ ಶುಲ್ಕ ಪಡೆಯುತ್ತಾರೆ. ದೇಗುಲದ ವಾತಾವರಣ ಮತ್ತು ಸುರಕ್ಷತೆಯ ದೃಷ್ಟಿಯಿಂದ ಹೀಗೆ ಹೊರಗೆ ಧೂಪ ಹಾಕುವ ಪದ್ಧತಿ ಬಂದಿದೆ ಅನ್ನುವುದು ಸ್ಥಳೀಯರ ಮಾತು. ಅದೇನೇ ಇರಲಿ, ಭಕ್ತರ ಭಕ್ತಿ ಸಮರ್ಪಣೆ ಜೊತೆ ಜೊತೆಗೆ ಕೆಲ ಕುಟುಂಬಗಳ ಹೊಟ್ಟೆ ತುಂಬಿಸುತ್ತಿದೆ ಈ ಪದ್ಧತಿ.

—ಆಶಾ ಎಸ್.ಎಂ., ಚಿತ್ರದುರ್ಗ